# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | : | 649 (790) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಾರಿಯಲ್ಲಿರುವ ಕನಿಷ್ಠ ವೇತನ ವ್ಯವಸ್ಥೆಯಡಿ ಇತ್ತೀಚೆಗೆ ಯಾವೆಲ್ಲ ನಿಗದಿತ ಉದ್ಯೋಗಗಳ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿದೆ; ಉದ್ಯೋಗವಾರು, ವರ್ಗವಾರು ಹಾಗೂ ಪರಿಷ್ಕೃತ ವೇತನದ ವಿವರಗಳೇನು; | 84 ಅನುಸೂಚಿತ ಉದ್ದಿಮೆಗಳಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ, ಅಧಿಸೂಚನೆ ಸಂಖ್ಯೆ: ಕಾಇ 411 ಎಲ್ ಡಬ್ಲ್ಯೂಎ 2023, ದಿನಾಂಕ:22.05.2026 ಅನ್ನು ಹೊರಡಿಸಲಾಗಿದೆ.<br><br>ಉದ್ಯೋಗವಾರು, ವರ್ಗವಾರು ಹಾಗೂ ಪರಿಷ್ಕೃತ ವೇತನದ ವಿವರ ಈ ಕೆಳಕಂಡಂತಿದೆ:<br><br>ಅಪಾಯಕಾರಿಯಲ್ಲದ ಉದ್ದಿಮೆಗಳಿಗೆ ಅನ್ವಯವಾಗುವ ವಲಯವಾರು ಹಾಗು ಕೌಶಲ್ಯವಾರು ನಿಗದಿಪಡಿಸಿರುವ ಕನಿಷ್ಠ ವೇತನದ ವಿವರ: |

| ಕೌಶಲ್ಯ ವಾರು ವಿವರ | ವಲಯ-1 | | ವಲಯ-2 | | ವಲಯ-3 | |
|---|---|---|---|---|---|---|
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಅತಿಕುಶಲ | 1196.69 | 31114.02 | 1087.90 | 28285.47 | 989.00 | 25714.07 |
| ಕುಶಲ | 1087.90 | 28285.47 | 989.00 | 25714.07 | 899.09 | 23376.43 |
| ಅರೆ ಕುಶಲ | 989.00 | 25714.07 | 899.09 | 23376.43 | 817.35 | 21251.30 |
| ಅಕುಶಲ | 899.09 | 23376.43 | 817.35 | 21251.30 | 743.05 | 19319.36 |

ಅತ್ಯಂತ ಅಪಾಯಕಾರಿ ಉದ್ದಿಮೆಗಳಿಗೆ ಅನ್ವಯವಾಗುವ ಕನಿಷ್ಠ ವೇತನದ ವಿವರಗಳು:

| ಕೌಶಲ್ಯ ವಾರು ವಿವರ | ವಲಯ-1 | | ವಲಯ-2 | | ವಲಯ-3 | |
|---|---|---|---|---|---|---|
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಅತಿಕುಶಲ | 1316.36 | 34225.42 | 1196.69 | 31114.02 | 1087.90 | 28285.47 |
| ಕುಶಲ | 1196.69 | 31114.02 | 1087.90 | 28285.47 | 989.00 | 25714.07 |
| ಅರೆ ಕುಶಲ | 1087.90 | 28285.47 | 989.00 | 25714.07 | 899.09 | 23376.43 |
| ಅಕುಶಲ | 989.00 | 25714.07 | 899.09 | 23376.43 | 817.35 | 21251.30 |

| | | |
|---|---|---|
| ಆ) | ರಾಜ್ಯ ಸರ್ಕಾರದ ರಾಜ್ಯ ಪತ್ರ ಸಂಖ್ಯೆ. ಕಾಇ 411 ಎಲ್‌ಡಬ್ಲ್ಯೂಎ 2023 ದಿನಾಂಕ: 22-05-2026 ರ ಅಧಿಸೂಚನೆಯಂತೆ ಕ್ರಮವಹಿಸಲಾಗಿದೆಯೇ; ಈ ನಿಯಮಗಳು ಖಾಸಗಿ ಸಂಸ್ಥೆಗಳ ಮತ್ತು ಸರ್ಕಾರಿ ಒಳಗುತ್ತಿಗೆ, ಹೊರಗುತ್ತಿಗೆ, ಗ್ರಾಮ ಪಂಚಾಯತಿ ಹಾಗೂ ಇತರ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದ ನೌಕರ / ಸಿಬ್ಬಂದಿಗಳಿಗೆ ಅನ್ವಯವಾಗುತ್ತವೆಯೇ; ಆರ್ಥಿಕ ಇಲಾಖೆ ಅನುಮೋದನೆಯಿಲ್ಲವೆಂಬ ನೆಪವೊಡ್ಡಿ ಕನಿಷ್ಠ ವೇತನ ನೀಡದಿರುವ ಬಗ್ಗೆ ಸರ್ಕಾರದ ಕ್ರಮಗಳೇನು; | ಹೌದು.<br><br>ಅಧಿಸೂಚನೆ ಸಂಖ್ಯೆ: ಕಾಇ 411 ಎಲ್ ಡಬ್ಲ್ಯೂಎ 2023, ದಿನಾಂಕ:22.05.2026 ಅನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೊರಡಿಸಲಾಗಿದೆ.<br><br>ದಿನಾಂಕ:22-05-2026 ರ ಅಧಿಸೂಚನೆಯು 84 ಅನುಸೂಚಿತ ಉದ್ಯಮಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಅನ್ವಯವಾಗುತ್ತದೆ.<br><br>ಅಧಿಸೂಚನೆ ಸಂಖ್ಯೆ: ಕಾಇ 411 ಎಲ್‌ಡಬ್ಲ್ಯೂಎ 2023ನ್ನು ದಿನಾಂಕ:22-05-2026ಕ್ಕೆಸಂಬಂಧಿಸಿದಂತೆ ದಿನಾಂಕ:13.08.2026ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ, ಕೇಂದ್ರ ಸರ್ಕಾರವು ವೇತನ ಸಂಹಿತೆ 2019 (Code on Wages-2019) ಜಾರಿಗೆ ತಂದ ನಂತರ ರಾಜ್ಯ ಕಾರ್ಮಿಕ ಇಲಾಖೆಯು ಕನಿಷ್ಠ ವೇತನ ದರಗಳ ಪರಿಷ್ಕರಣೆ ಕುರಿತು ದಿನಾಂಕ:22.05.2026 ರಂದು ಅಧಿಸೂಚನೆ ಹೊರಡಿಸಿರುವುದರಿಂದ ಅದರಲ್ಲಿನ ಅಂಶಗಳು ಕೇಂದ್ರ ಸರ್ಕಾರದ ಸಂಹಿತೆಗೆ ಅನುಗುಣವಾಗಿದೆಯೇ ಎಂಬುವುದರ ಬಗ್ಗೆ ಪರಿಶೀಲಿಸಲು ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ. ಇದರನ್ವಯ ಅಧಿಕೃತ ಜ್ಞಾಪನ ಸಂಖ್ಯೆ: ಸಸಂಶಾ 06 ಸಿಎಸ್ ಸಿ 2026, ದಿನಾಂಕ:18.08.2026ರಲ್ಲಿ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ. ಸಚಿವ ಸಂಪುಟದ ಉಪಸಮಿತಿಯು ವರದಿ ನೀಡಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.<br><br>ಮಾನ್ಯ ನ್ಯಾಯಾಲಯದಲ್ಲಿ ಅಧಿಸೂಚನೆಯನ್ನು ಪ್ರಶ್ನಿಸಿ, ರಿಟ್ ಅರ್ಜಿಗಳು ದಾಖಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿನ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಇ) | ಇತ್ತೀಚಿನ ಕನಿಷ್ಠ ವೇತನ ಪರಿಷ್ಕರಣೆಯಲ್ಲಿ ರಾಜ್ಯದ ಗಾರ್ಮೆಂಟ್ ಹಾಗೂ ಬೀಡಿ ಉದ್ಯಮದ ಕಾರ್ಮಿಕರನ್ನು ಉದ್ದೇಶ ಪೂರ್ವಕವಾಗಿ ಹೊರಗಿಡಲಾಗಿದೆಯೇ;<br>ಹೌದಾದರೆ, ಅದಕ್ಕೆ ಕಾನೂನು ಬದ್ಧ, ಆಡಳಿತಾತ್ಮಕ ಕಾರಣಗಳೇನು; | ದಿನಾಂಕ:22-05-2026 ರಂದು ಕನಿಷ್ಠ ವೇತನ ಪರಿಷ್ಕರಿಸಿ ಹೊರಡಿಸಲಾದ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಶ್ರಮಿಕ ಪ್ರಾಧಾನ್ಯತೆ ಇರುವ ಗಾರ್ಮೆಂಟ್ ಹಾಗೂ ತುಂಡು ಆಧಾರದ ಬೀಡಿ ಉದ್ದಿಮೆಗಳು ಸೇರಿದಂತೆ 19 ಅನುಸೂಚಿತ ಉದ್ದಿಮೆಗಳನ್ನು ಕನಿಷ್ಠ ವೇತನ ಕಾಯ್ದೆ 1948 ರ ಕಲಂ 5 (1) (ಎ) ರಡಿ ಸಮಿತಿ ವಿಧಾನದ ಮೂಲಕ ವೇತನ ಪರಿಷ್ಕರಿಸಲಾಗುವುದು.<br><br>ಸದರಿ ಸಮಿತಿಯು ತ್ರಿಪಕ್ಷೀಯ ಸಮಿತಿಯಾಗಿದ್ದು, ಮಾಲೀಕ ಪ್ರತಿನಿಧಿಗಳು, ಕಾರ್ಮಿಕ ಪ್ರತಿನಿಧಿಗಳು ಹಾಗೂ ಸರ್ಕಾರದ ಅಧಿಕಾರಿಗಳು ಸದಸ್ಯರಾಗಿದ್ದು, ಸದರಿ ಉದ್ದಿಮೆಗಳ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ಚರ್ಚೆ ನಡೆಸಲಾಗುವುದು ಹಾಗು ಸಮಿತಿ ಸಭೆಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಆಧರಿಸಿ |

| | | |
|---|---|---|
| | | ಅಧಿಸೂಚನೆ ಹೊರಡಿಸಲು ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |
| ಈ) | ರಾಜ್ಯ ಲಕ್ಷಾಂತರ ಗಾರ್ಮೆಂಟ್ ಹಾಗೂ ಬೀಡಿ ಕಾರ್ಮಿಕರಿಗೆ ಇತ್ತೀಚಿನ ಕನಿಷ್ಠ ವೇತನ ಪರಿಷ್ಕರಣೆಯ ಪ್ರಯೋಜನ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ವರ್ಗದ ಕಾರ್ಮಿಕರನ್ನು ಪರಿಷ್ಕರಣೆಯಿಂದ ಹೊರತುಪಡಿಸಿರುವ ಬಗ್ಗೆ ಸರ್ಕಾರದ ಸಮರ್ಥನೆಯೇನು; | ತುಂಡು ಆಧಾರದ (ಪೀಸ್ ವರ್ಕ್) ಕೆಲಸದ ಸ್ವರೂಪಗಳಿರುವ ಹಾಗೂ ಶ್ರಮಿಕ ಪ್ರಾಧಾನ್ಯತೆಯುಳ್ಳ ಗಾರ್ಮೆಂಟ್ ಮತ್ತು ಬೀಡಿ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ಕಾಯ್ದೆ 1948 ರ ಕಲಂ 5 (1) (ಎ) ರ ಪ್ರಾವಧಾನಗಳನುಸಾರ ಸಮಿತಿ ವಿಧಾನದ ಮುಖಾಂತರ ಕನಿಷ್ಠ ವೇತನ ದರಗಳನ್ನು ಪರಿಷ್ಕರಣೆ ಮಾಡಲಾಗುತ್ತದೆ.<br><br>ಬೀಡಿ ಉದ್ದಿಮೆಗೆ ನಿಕಟಪೂರ್ವ ದಿನಾಂಕ:27-02-2025 ರಂದು ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಆದುದರಿಂದ, ದಿನಾಂಕ: 22-05-2026 ರಂದು ಹೊರಡಿಸಲಾದ ಅಧಿಸೂಚನೆಯ ದರಗಳು ಬೀಡಿ ಉದ್ಯಮದ ಕಾರ್ಮಿಕರಿಗೆ ಅನ್ವಯವಾಗುವುದಿಲ್ಲ.<br><br>ಕರ್ನಾಟಕ ಉಚ್ಛ ನ್ಯಾಯಾಲಯವು ಗಾರ್ಮೆಂಟ್ಸ್ ಉದ್ದಿಮೆಗೆ ಸಂಬಂಧಿಸಿದಂತೆ, ರಿಟ್ ಅರ್ಜಿ ಸಂಖ್ಯೆ: 14466/2023 ರಲ್ಲಿ ದಿನಾಂಕ:03.06.2026 ರಂದು ನೀಡಿರುವ ಆದೇಶದನ್ವಯ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ಪರಿಶೀಲಿಸಲಾಗುತ್ತಿದೆ. |
| ಉ) | ಗಾರ್ಮೆಂಟ್ ಹಾಗೂ ಬೀಡಿ ಉದ್ಯಮಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಜೀವನೋಪಾಯಕ್ಕೆ ತಕ್ಕ ನ್ಯಾಯಸಮ್ಮತ ಕನಿಷ್ಠ ವೇತನವನ್ನು ಖಚಿತಪಡಿಸಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; ಇತ್ತೀಚಿನ ವೇತನ ಪರಿಷ್ಕರಣೆಯ ಲಾಭನವನು ಈ ಕಾರ್ಮಿಕರಿಗೂ ಸೇರಿದಂತೆ ಎಲ್ಲಾ ವರ್ಗದ ಕಾರ್ಮಿಕರಿಗೆ ವಿಸ್ತರಿಸುವ ಕುರಿತು ಸರ್ಕಾರದ ನಿಲುವೇನು ? | ತುಂಡು ಆಧಾರದ (ಪೀಸ್ ವರ್ಕ್) ಕೆಲಸದ ಸ್ವರೂಪಗಳಿರುವ ಹಾಗೂ ಶ್ರಮಿಕ ಪ್ರಾಧಾನ್ಯತೆಯುಳ್ಳ ಗಾರ್ಮೆಂಟ್ ಮತ್ತು ಬೀಡಿ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ಕಾಯ್ದೆ 1948 ರ ಕಲಂ 5 (1) (ಎ) ರ ಪ್ರಾವಧಾನಗಳನುಸಾರ ಸಮಿತಿ ವಿಧಾನದ ಮುಖಾಂತರ ಕನಿಷ್ಠ ವೇತನ ದರಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ<br><br>ದಿನಾಂಕ:22-05-2026 ರಂದು ಕನಿಷ್ಠ ವೇತನ ಪರಿಷ್ಕರಿಸಿ ಹೊರಡಿಸಲಾದ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಶ್ರಮಿಕ ಪ್ರಾಧಾನ್ಯತೆ ಇರುವ ಗಾರ್ಮೆಂಟ್ ಹಾಗೂ ತುಂಡು ಆಧಾರದ ಬೀಡಿ ಉದ್ದಿಮೆಗಳು ಸೇರಿದಂತೆ 19 ಅನುಸೂಚಿತ ಉದ್ದಿಮೆಗಳನ್ನು ಕನಿಷ್ಠ ವೇತನ ಕಾಯ್ದೆ 1948 ರ ಕಲಂ 5 (1) (ಎ) ರಡಿ ಸಮಿತಿ ವಿಧಾನದ ಮೂಲಕ ವೇತನ ಪರಿಷ್ಕರಿಸಲಾಗುವುದು. |

**ಸಂಖ್ಯೆ: LD 544 LWA 2026**

**(ಸಂತೋಷ್ ಎಸ್.ಲಾಡ್)**

**ಕಾರ್ಮಿಕ ಸಚಿವರು**